## Government of Karnataka

**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 1252/2023 |

ದಿನಾಂಕ 16-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 1 ಪ್ರಾಸಾಃ 1

| | |
|---|---|
| ಹೆಸರು | ನರಸಿಂಹ |
| ತಂದೆಯ ಹೆಸರು | ನಾಗಪ್ಪ |
| ವಯಸ್ಸು | 28 ವರ್ಷ |
| ಉದ್ಯೋಗ | ಮೆಕಾನಿಕ್ |
| ವಾಸಸ್ಥಳ | ಕೊಪ್ಪರ , ತಾ ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ: -**

ಚಾಸಾ-2 ರಿಂದ 5 ರವರು ನಮ್ಮೂರಿನವರು ಪರಿಚಯ ಇರುತ್ತಾರೆ. ಆರೋಪಿಯು ಪರಿಚಯ ಇದೆ. ದಿನಾಂಕ: 24-10-2023 ರಂದು ಮಧ್ಯಾಹ್ನ 2-30 ಗಂಟೆ ಸುಮಾರಿಗೆ ನಾನು ದೇವದುರ್ಗದಲ್ಲಿ ಕೆಲಸ ಮುಗಿಸಿಕೊಂಡು ಊರಿಗೆ ಮೋಟಾರ್ ಸೈಕಲ್ ಮೇಲೆ ಕುಳಿತುಕೊಂಡು ಹೋಗುತ್ತಿದ್ದಾಗ, ರಾಮನಾಳ ದಾಟಿದ ನಂತರ ನೀರಿನ ಟ್ಯಾಂಕ್ ಹತ್ತಿರ ರಸ್ತೆಯಲ್ಲಿ ಹೋಗುತ್ತಿದ್ದಾಗ, ಆರೋಪಿತನು ಅಲ್ಲಿಗೆ ಬಂದು ಮೋಟಾರ್ ಸೈಕಲ್ ನ್ನು ಅಕ್ರಮವಾಗಿ ತಡೆದು ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೋಳಿ ಮಗನೆ, ನಮ್ಮ ಊರಿನ ಹುಡುಗರನ್ನು ಏಕೆ ಹೊಡೆದಿದ್ದೀಯಾ ಎಂದು ಬೈದಿರುತ್ತಾನೆ. ಮೊದಲು ಕೈಯಿಂದ ಕಪಾಳಕ್ಕೆ ಮತ್ತು ಬುಜಕ್ಕೆ ಹೊಡೆದಿರುತ್ತಾನೆ. ನಂತರ ಕಟ್ಟಿಗೆಯಿಂದ ತಲೆಗೆ, ಬೆನ್ನಿಗೆ, ಕೈಗೆ ಮತ್ತು ಕಾಲಿಗೆ ಹೊಡೆದಿರುತ್ತಾನೆ. ನನ್ನ ಬಲಗಡೆ ಭುಜದ ಭಾಗಕ್ಕೆ ರಕ್ತಗಾಯ ಮಾಡಿರುತ್ತಾನೆ. ಆಗ ನಮ್ಮೂರಿನ ಅಲ್ಲೆ ಇದ್ದ ಚಾಸಾ-2 ರಿಂದ 4 ರವರು ಬಂದು ಜಗಳ ಬಿಡಿಸಿರುತ್ತಾರೆ. ಹೋಗುವಾಗ ಆರೋಪಿತನು ಇವತ್ತು ನೀನು ಉಳಿದುಕೊಂಡಿಯಾ ಇನ್ನೊಂದು ಸಲ ಸಿಕ್ಕರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾನೆ. ನಂತರ

ನಾನು ಮನೆಗೆ ಹೋಗಿರುತ್ತೇನೆ. ನಂತರ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಮಾರನೇ ದಿನ ದಿನಾಂಕ: 25-10-2023 ರಂದು ದೂರು ಕೊಟ್ಟಿರುತ್ತೇನೆ. ಸಾಕ್ಷಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿ ಪಿ 1 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 1 (ಎ) ಎಂದು ಗುರುತಿಸಲಾಯಿತು. ಮರು ದಿನ ಪೋಲಿಸರು ಬಂದು ಘಟನಾ ಸ್ಥಳದಲ್ಲಿ ಪಂಚನಾಮೆಯನ್ನು ಸಂಜೆ 4-00 ರಿಂದ 5-00 ಗಂಟೆಯವರೆಗೆ ಪಂಚ ಸಾಕ್ಷಿದಾರರಾದ ಚಾಸಾ-2 ಮತ್ತು 3 ರವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿಕೊಂಡು ಕೃತ್ಯಕ್ಕೆ ಬಳಿಸಿದ ಒಂದು ಬಡಿಗೆಯನ್ನು ವಶಪಡಿಸಿಕೊಂಡು ಹೋಗಿರುತ್ತಾರೆ. ಸಾಕ್ಷಿದಾರರು ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿ ಪಿ 2 ಎಂದು ಪಂಚನಾಮೆಯಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ಕೃತ್ಯಕ್ಕೆ ಬಳಸಿದ ಕಟ್ಟಿಗೆಯನ್ನು ನೋಡಿದರೆ ಗುರುತಿಸುತ್ತೆನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

ಮುದ್ದೆಮಾಲು ಜಮಾ ಮಾಡದೇ ಇರುವುದರಿಂದ ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ

**Government of Karnataka**

**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 1252/2023 |

ದಿನಾಂಕ 16-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 4 ಪ್ರಾಸಾಃ 2

| | |
|---|---|
| ಹೆಸರು | ಸಿದ್ದಪ್ಪ |
| ತಂದೆಯ ಹೆಸರು | ಹನುಮಂತ |
| ವಯಸ್ಸು | 42 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಕೊಪ್ಪರ , ತಾ ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ : -**

ಚಾಸಾ-1 ರಿಂದ 3 ಮತ್ತು 5 ರವರು ನಮ್ಮೂರಿನವರು ಪರಿಚಯ ಇರುತ್ತಾರೆ. ಆರೋಪಿಯನ್ನು ನೋಡಿರುತ್ತೇನೆ. ಸುಮಾರು 2 ವರ್ಷಗಳ ಹಿಂದೆ ಮದ್ಯಾಹ್ನ 2-00 ಗಂಟೆ ಸುಮಾರಿಗೆ ನಾನು ದೇವದುರ್ಗದಲ್ಲಿ ಕೆಲಸ ಮುಗಿಸಿಕೊಂಡು ಊರಿಗೆ ಮೋಟಾರ್ ಸೈಕಲ್ ಮೇಲೆ ಕುಳಿತುಕೊಂಡು ಹೋಗುತ್ತಿದ್ದಾಗ, ರಾಮನಾಳ ದಾಟಿದ ನಂತರ ನೀರಿನ ಟ್ಯಾಂಕ್ ಹತ್ತಿರ ರಸ್ತೆಯಲ್ಲಿ ಹೋಗುತ್ತಿದ್ದಾಗ, ಆರೋಪಿತನು ಅಲ್ಲಿಗೆ ಚಾಸಾ-1 ರವರ ಮೋಟಾರ್ ಸೈಕಲ್ ನ್ನು ಅಕ್ರಮವಾಗಿ ತಡೆದು ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ, ಮತ್ತು ಚಾಸಾ-1 ರವರಿಗೆ ಬಡಿಗೆ ತೆಗೆದುಕೊಂಡು ತಲೆಗೆ, ಬೆನ್ನಿಗೆ, ಕೈಗೆ ಮತ್ತು ಕಾಲಿಗೆ ಹೊಡೆದಿರುತ್ತಾನೆ. ಚಾಸಾ-1 ರವರ ಬಲಗಡೆ ಭುಜದ ಭಾಗಕ್ಕೆ ರಕ್ತಗಾಯ ಮಾಡಿರುತ್ತಾನೆ. ಆಗ ನಮ್ಮೂರಿನ ಅಲ್ಲೆ ಇದ್ದ ನಾನು ಮತ್ತು ಚಾಸಾ-5 ರವರು ಬಂದು ಜಗಳ ಬಿಡಿಸಿರುತ್ತೇವೆ. ನಂತರ ಚಾಸಾ-1 ರವರನ್ನು ದೇವದುರ್ಗಕ್ಕೆ ಕರೆದುಕೊಂಡು ಹೋಗಿ ಆಸ್ಪತ್ರೆಗೆ ಸೇರಿಸಿರುತ್ತೇವೆ. ಚಿಕಿತ್ಸೆ ಪಡೆದುಕೊಂಡು ಮಾರನೇ ದಿನ ಚಾಸಾ-1 ರವರು ದೂರು ಕೊಟ್ಟಿರುತ್ತಾನೆ. ಈ ಬಗ್ಗೆ ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೆನೆ.

ಕೃತ್ಯಕ್ಕೆ ಬಳಸಿದ ಕಟ್ಟಿಗೆಯನ್ನು ನೋಡಿದರೆ ಗುರುತಿಸುತ್ತೆನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

ಮುದ್ದೆಮಾಲು ಜಮಾ ಮಾಡದೇ ಇರುವುದರಿಂದ ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ

**Government of Karnataka**

**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 1252/2023 |

ದಿನಾಂಕ 16-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 5 ಪ್ರಾಸಾಃ 3

| | |
|---|---|
| ಹೆಸರು | ಸಿದ್ದಪ್ಪ |
| ತಂದೆಯ ಹೆಸರು | ನಾಗಪ್ಪ |
| ವಯಸ್ಸು | 40 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಕೊಪ್ಪರ , ತಾ ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ : -**

ಚಾಸಾ-1 ರಿಂದ 4 ರವರು ನಮ್ಮೂರಿನವರು ಪರಿಚಯ ಇರುತ್ತಾರೆ. ಆರೋಪಿಯನ್ನು ನೋಡಿರುತ್ತೇನೆ. ದಿನಾಂಕ: 24-10-2023 ರಂದು ಮಧ್ಯಾಹ್ನ 2-00 ಗಂಟೆ ಸುಮಾರಿಗೆ ನಾನು ದೇವದುರ್ಗದಲ್ಲಿ ಕೆಲಸ ಮುಗಿಸಿಕೊಂಡು ಊರಿಗೆ ಮೋಟಾರ್ ಸೈಕಲ್ ಮೇಲೆ ಕುಳಿತುಕೊಂಡು ಹೋಗುತ್ತಿದ್ದಾಗ, ರಾಮನಾಳ ದಾಟಿದ ನಂತರ ನೀರಿನ ಟ್ಯಾಂಕ್ ಹತ್ತಿರ ರಸ್ತೆಯಲ್ಲಿ ಹೋಗುತ್ತಿದ್ದಾಗ, ಆರೋಪಿತನು ಚಾಸಾ-1 ರವರ ಮೋಟಾರ್ ಸೈಕಲ್ ನ್ನು ಅಕ್ರಮವಾಗಿ ತಡೆದು ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಸೂಳೆ ಮಗನೆ, ನಮ್ಮ ಊರಿನ ಹುಡುಗರನ್ನು ಏಕೆ ಹೊಡೆದಿದ್ದೀಯಾ ಎಂದು ಬೈದಿರುತ್ತಾನೆ. ನಂತರ ಕಟ್ಟಿಗೆಯಿಂದ ತಲೆಗೆ, ಬೆನ್ನಿಗೆ, ಕೈಗೆ ಮತ್ತು ಕಾಲಿಗೆ ಹೊಡೆದಿರುತ್ತಾನೆ. ಚಾಸಾ-1 ರವರ ಬಲಗಡೆ ಭುಜದ ಭಾಗಕ್ಕೆ ರಕ್ತಗಾಯ ಮಾಡಿರುತ್ತಾನೆ. ಆಗ ನಮ್ಮೂರಿನ ಅಲ್ಲೆ ಇದ್ದ ನಾನು ಮತ್ತು ಚಾಸಾ-3 ಮತ್ತು 4 ರವರು ಬಂದು ಜಗಳ ಬಿಡಿಸಿರುತ್ತೇವೆ. ಹೋಗುವಾಗ ಆರೋಪಿತನು ಚಾಸಾ-1 ರವರಿಗೆ ಇವತ್ತು ನೀನು ಇವರು ಬಂದಿದ್ದರಿಂದ ಉಳಿದುಕೊಂಡಿಯಾ ಇನ್ನೊಂದು ಸಲ ಸಿಕ್ಕರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾನೆ. ನಂತರ ಚಾಸಾ-1 ರವರನ್ನು ದೇವದುರ್ಗ ಸರಕಾರಿ ಆಸ್ಪತ್ರೆಗೆ ಹೋಗಿ

ಚಿಕಿತ್ಸೆಗೆ ಸೇರಿಸಿರುತ್ತೇವೆ. ಮಾರನೇ ದಿನ ದಿನಾಂಕ: 25-10-2023 ರಂದು ಚಾಸಾ-1 ರವರು ದೂರು ಕೊಟ್ಟಿರುತ್ತಾರೆ ಕೃತ್ಯಕ್ಕೆ ಬಳಸಿದ ಕಟ್ಟಿಗೆಯನ್ನು ನೋಡಿದರೆ ಗುರುತಿಸುತ್ತೆನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

ಮುದ್ದೆಮಾಲು ಜಮಾ ಮಾಡದೇ ಇರುವುದರಿಂದ ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ